ಮಹಿಳೆಯರು ಹೇಳಿದಂತೆ ಕೇಳಿದರು.

ಮಹಿಳೆಯರ ಸ್ವಾಗತ, ಭಜನೆ ಗೀತೆ, ಸಾಮೂಹಿಕ ಗೀತೆ, ಪ್ರಸ್ತಾವನೆ, ವಾರ್ಷಿಕವರದಿ ಈ ಎಲ್ಲವೂ ಸುಸೂತ್ರವಾಗೇ ನಡೆಯುತ್ತಿತ್ತು. ಮಧ್ಯೆಮಧ್ಯೆ ಅವರ ಮಕ್ಕಳುಗಳ ಭರತನಾಟ್ಯ, ಸಂಗೀತ, ನೃತ್ಯವೂ ಸೇರ್ಪಡೆಯಾಗಿದ್ದವು. ಕವಿ ನಿಗದಿಪಡಿಸಿಕೊಂಡಿದ್ದ ಒಂದು ಗಂಟೆಯೆಂಬುದು ಸಮೀಪಕ್ಕೆ ಬಂದರೂ ಕಾರ್ಯಕ್ರಮದ ಅರ್ಧದಷ್ಟೂ ನೆರವೇರದಿರುವುದು ಕಂಡುಬಂದು ದಿಗಿಲಾಗುತ್ತಿತ್ತು. ಕವಿ ಗಡಿಯಾರ ನೋಡಿಕೊಂಡು ಮುಖ ಸಪ್ಪಗೆ ಮಾಡಿಕೊಳ್ಳುತ್ತಿದ್ದನು. ಹನುಮಯ್ಯನ ತಿಥಿಯ ಓತಗಳ ಮೇಲೆ ಕವಿಗೆ ಈಗಿನದಷ್ಟೆ ಮೋಹವಲ್ಲ. ಆತ ತನ್ನ ಹೊಲಕ್ಕೆ ಹೋಗುವಾಗ ಬರುವಾಗಲೆಲ್ಲ ಹನುಮಯ್ಯನ ಓತಗಳು ಬೇಲಿ ಮೇಲತ್ತಿ ಮೇಯುತ್ತಿರುವುದನ್ನ, ಬೇವಿನ ಸೊಪ್ಪು ಸೆಣೆದು ತಿನ್ನಿಸುತ್ತಿರುವುದನ್ನ ನೋಡುತ್ತಲೇ ಇರುತ್ತಿದ್ದ. ಯಾಕೆ ಈ ಹಳ್ಳಿಗಳಲ್ಲಿ ನಡೆಯುವ ಬಾಡೂಟ ಕಾರ್ಯಕ್ರಮಗಳ ಮೇಲೆ ಕವಿಗೆ ಮೋಹವೆಂದರೆ ಹೋಟ್ಲುಗಳಲ್ಲಿ ಕುಯ್ಯುವ ಮರಿಗಳು ಹಿಂಗೆ ಸಪುಷ್ಟವಾಗಿ ಬೆಳೆದವಾಗಿರುವುದಿಲ್ಲ. ಸತ್ತವು ಕೆಟ್ಟವು ಕುಯ್ದಿರ್ತರೆ. ದೇವರಿಗೆಂದು ಬಿಟ್ಟುಕೊಂಡವಾದರೆ ಮನೆಯಲ್ಲಿ ಸಾಕರ್ತರೆ, ನಾಟಿ ಮರಿಗಳು ರುಚಿಯಲ್ಲಿ ಮೇಲು, ಆಯುರ್ವೇದದ ಗುಣ ಇರುತ್ತೆ ಎಂದು ಕೇಳಿ ತಿಳಿದಿದ್ದನು. ಮೇಲಾಗಿ ತನ್ನ ಜಾತಿಯ ಕಾರಣದಿಂದಾಗಿ ತನ್ನ ಮನೆಯಲ್ಲಿ ಸ್ವತಃ ಬೇಯಿಸಿಕೊಂಡು ತಿನ್ನುವ ಪರಿಪಾಟರಲಿಲ್ಲ. ಇದಕ್ಕೆ ಹೆಂಡತಿ ತುಳಸೀದೇವಿ ಸುತ್ರಾಮ್ ಒಪ್ಪುತ್ತಿರಲಿಲ್ಲ. ಹಾಗಾಗಿ ಹಳ್ಳಿಗಳ ಮೇಲೆ ನಡೆಯುವ ತಿಥಿ, ದೇವರ ಕಾರ್ಯಗಳಿಗೆ ಕಾಯಂ ಗೌರವಾನ್ವಿತ ಅತಿಥಿಯಾಗಿರುತ್ತಿದ್ದ. ಉತ್ತಮ ಜಾತಿಯ ಕವಿ ನಮ್ಮ ಮನೆಗಳಿಗೆ ಬಂದು ಬಡಿಸಿದ್ದನ್ನ ತಿಂದೋಗುತ್ತಾರೆ ಎಂಬುದು ಈ ಮಾಂಸ ತಿನ್ನುವ ಜಾತಿಗಳವರ ಮೇಲರಿಮೆಯಾಗಿತ್ತು. ತನ್ನ ಗಂಡ ಹೀಗೆ ಬಾಡು ತಿನ್ನಲು ಹೋಗೇ ಹೋಗುತ್ತಾನೆಂಬುದ ಪತ್ತೆ ಹಚ್ಚಿಕೊಂಡೇ ಅವನನ್ನು ಬೀದಿಗೋಗದಂತೆ ತಡೆಯಲೆಂದೇ ಪಿತೂರಿ ಮಾಡಿ ಮಹಿಳಾ ಒಕ್ಕೂಟದ ಕಾರ್ಯಕ್ರಮಕ್ಕೆ ಅತಿಥಿಯಾಗಿಸಿಕೊಂಡಿದ್ದಳೇನ, ಆ ಮರ್ಮ ತಿಳಿಯದು. ಅಂತೂ ತುಳಸೀದೇವಿಯನ್ನ ಅವಳ ಗೆಳತಿಯರು ಛೇಡಿಸುವುದಿತ್ತು.

ಸಮಯ ಮೀರಿದಂತೆಲ್ಲ ಕವಿಗೆ ವೇದಿಕೆಯಲ್ಲಿ ಹೆಚ್ಚಾಗಿ ಕೂರಲಾಗುತ್ತಿರಲಿಲ್ಲ. ತನ್ನ ಹೆಂಡತಿ ಒಂದೆರಡು ಬಾರಿ ದುರುಗುಟ್ಟಿ ನೋಡಿದ್ದರಿಂದ ಹೋಗಬೇಕೆಂದು ಟೈಮ್ ನೋಡಿಕೊಂಡವನು ಹಾಗೇ ಮುದುರಿಕೊಂಡಿದ್ದ. ಹೀಗೇ ನಾಕಾರು ಬಾರಿ ಆದಾಗ ಈಗ ಧೈರ್ಯ ತಾಳಿ ತನ್ನ ಹೆಂಡತಿಯ ಕಡೆಗೆ ನೋಡದೆ, ತನಗೆ ಇನ್ನೊಂದು ಮುಖ್ಯವಾದ ಕೆಲಸವಿದೆ ಸ್ವಾಮಿಗಳು ಅನ್ಯಥಾ ಭಾವಿಸಬಾರದೆಂದು ಮೇಲೆದ್ದೇಬಿಟ್ಟನು. ವಿಚಲಿತರಾದ ಸ್ವಾಮಿಗಳು 'ಹಾಗಾದರೆ ಕವಿಗಳು ಮಾತಾಡಿ ಹೋಗಲಿ' ಎಂದರು. ಸರಿ ಎಂದು ಕವಿ ಮಹಿಳಾ ಮಣಿಗಳನ್ನುದ್ದೇಶಿಸಿ ಅವಸರವಸರವಾಗೇ ಏನೇನೋ ಹೇಳಿ, ತಾನೂ ಒಂದು ಶಾಲು ಹಾಕಿಸಿಕೊಂಡು ಹೊರಟೇಬಿಟ್ಟರು.

ಟೈಮ್ ಅದಾಗಲೇ ಎರಡು ಗಂಟೆ ಮೀರಿದ್ದರಿಂದ ಕಾರ್‌ನ ಬಿಟ್ಕೋದರೆ ತಡವಾಗುತ್ತೆ ಎಂದು ಬಗೆದು ಹೆಂಡತಿಗೆ ಇನ್ನೊಬ್ಬರ ಜೊತೆ ಬರಲು ನೇಮಿಸಿ ಬರಂದಾಗಿ ಹೊರಟೇಬಿಟ್ಟರು. ಬ್ಯಾಲಳ್ಳಿಲಿ ಬಂದ ನೆಂಟರಿಷ್ಟರೆಲ್ಲ ಬೆಳಗ್ಗೇನೆ ಗುಡ್ಡೆತಕೋಗಿ ಎಡೆ ಇಟ್ಟು, ಪೂಜೆ ಮಾಡಿ, ಗುಡ್ಡೆಶಾಸ್ತ್ರ ಮುಗಿಸಿ ಮನೆಕಡೆಗೆ ವಾಪಾಸ್ ಆಗುತ್ತಿದ್ದರು. ಕವಿ ಚಲಪತಿಯ ಕಾರು ಹಟ್ಟಿ ತಲುಪುವಷ್ಟರಲ್ಲಿ ದಿವಂಗತ ಹನುಮಯ್ಯನ ಮಗ ಮಂಜ ತಲೆ ಬೋಳ ಮಾಡಿಸಿಕೊಂಡು, ಅಲ್ಲಿ ಬಂದ ನೆಂಟರಿಷ್ಟರಿಗೆ ಎದುರಾಗುವ ಶಾಸ್ತ್ರ ನಡೆಯುತ್ತಿತ್ತು. ಉಣ್ಣಲು ಲೇಟಾಗುತ್ತದೆಂದು ಬಂದ ಚಲಪತಿಯೇ ಮೊದಲು ಬೋಳುತಲೆ ಮಂಜನ ದರುಶನ ಪಡೆದ. ನಂತರ ನೆಂಟರಿಷ್ಟರು ಪಡೆಯುವಂತಾಯಿತು. ಶ್ಯಾಮಿಯಾನದ ಅಡಿಕೋಗಿ ಕೂತ. ಗುಡ್ಡೆತಕೋಗಿ ಬಂದದ್ದರಿಂದ ಇನ್ನೇನು ಊಟ ಶುರುವಾಗುತ್ತೆ ನಾನು ಸರಿಯಾದ ಟೈಮಿಗೇ ಬಂದಿರುವೆ ಎಂದು ಒಳೊಳಗೆ ಹಿಗ್ಗಿದ. ಆತ ಕೂತ ಜಾಗದಿಂದ ಅನತೀ ದೂರದಲ್ಲಿ ಅಡುಗೆ ಬಟ್ಟರು ಅದಾಗಲೇ ಎಲ್ಲ ಅಡುಗೆ ಪೋರೈಸಿ ಮುದ್ದೆ ಕಟ್ಟಲು ಅಣಿಯಾಗುತ್ತಿದ್ದರು. ಸಾರಿನ ಘಮಲು ಕವಿಯನ್ನು ಉದ್ದೀಪಿಸುತ್ತಿತ್ತು. ಮೆಲ್ಲಗೆ ಜೊಲ್ಲು ತಾನಾಗೇ ನಸಗುಟ್ಟುತ್ತಿತ್ತು. ಕವಿ ಇವತ್ತಿನ ಬಾಡಿನ ಸುಖವನ್ನು ನೆನೆದು ಅವ್ಯಕ್ತವಾಗಿ ಖುಷಿ ಪಡುತ್ತಿದ್ದನು.